

ಉಡುಪೊಂದನ್ನು ಖರೀದಿಸುವಾಗ ಅದರ ಸೌಂದರ್ಯ, ಬೆಲೆ, ಧರಿಸಿದಾಗ ನೀಡಬಹುದಾದ ಹಿತಾನುಭವವನ್ನಷ್ಟೆ ಗಮನಿಸಿದರೆ ಸಾಲದು; ಆ ಉಡುಪು ಪರಿಸರ ಮಾಲಿನ್ಯಕ್ಕೆ ಎಷ್ಟರಮಟ್ಟಿಗೆ ಕಾರಣವಾಗಿರಬಹುದು ಎನ್ನುವುದನ್ನೂ ಯೋಚಿಸಬೇಕು. ಪ್ರತಿಷ್ಠಿತ ಬ್ರ್ಯಾಂಡಿನ ಮೊಹರು ಅಂಟಿಸಿಕೊಂಡ ಅಂಗಿಯೊಂದು, ವ್ಯಕ್ತಿಯೊಬ್ಬ ಮೂರ್ನಾಲ್ಕು ವರ್ಷ ಕುಡಿಯಬಹುದಾದಷ್ಟು ನೀರನ್ನು ಕುಡಿದಿರಬಹುದು. ಹತ್ತಿ ಬೆಳೆಗೆ ಬಳಕೆಯಾಗುವ ಒಳಸುರಿಗಳು ಹಾಗೂ ಬಟ್ಟೆಯ ಬಣ್ಣಕ್ಕೆ ಬಳಸುವ ರಾಸಾಯನಿಕಗಳು ಮಣ್ಣು, ನೀರು, ಗಾಳಿಯನ್ನು ಆತಂಕಕಾರಿ ಪ್ರಮಾಣದಲ್ಲಿ ಕಲುಷಿತಗೊಳಿಸುತ್ತಿವೆ. ಉಡುಪುಗಳ ಉದ್ಯಮದ ವಿರಾಟ್ ಸ್ವರೂಪದೊಂದಿಗೆ, ಆ ಉದ್ಯಮ ಪರಿಸರ ನಾಶಕ್ಕೆ ಹೇಗೆ ಕಾರಣವಾಗುತ್ತಿದೆ ಎನ್ನುವುದರತ್ತ ಗಮನಸೆಳೆಯುವ ಈ ಬರಹ, ನಮ್ಮ ಜೀವನಶೈಲಿಯನ್ನು ಪರಿಸರಸ್ನೇಹಿಯಾಗಿಸಿಕೊಳ್ಳಲು ಒತ್ತಾಯಿಸುತ್ತದೆ.